**ಕರ್ನಾಟಕ ವಿಧಾನಸಭೆ**

**ಹದಿನೈದನೇ ವಿಧಾನಸಭೆ**

**ಹದಿಮೂರನೇ ಅಧಿವೇಶನ**

# ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ (ತಿದ್ದುಪಡಿ) ವಿಧೇಯಕ, 2022

**(2022ರ ವಿಧಾನಸಭೆಯ ವಿಧೇಯಕ ಸಂಖ್ಯೆ-27)**

ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ ಅಧಿನಿಯಮ, 1966ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ

ಇಲ್ಲಿ ಇನ್ನುಮುಂದೆ ಕಂಡು ಬರುವ ಉದ್ದೇಶಗಳಿಗಾಗಿ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ ಅಧಿನಿಯಮ, 1966ನ್ನು (1966ರ ಕರ್ನಾಟಕ ಅಧಿನಿಯಮ 16) ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು, ಭಾರತ ಗಣರಾಜ್ಯದ ಎಪ್ಪತ್ತೂರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ (ತಿದ್ದುಪಡಿ) ಅಧಿನಿಯಮ, 2022 ಎಂದು ಕರೆಯತಕ್ಕದ್ದು.

(2) ಇದು, ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಶೀರ್ಷಿಕೆ ಮತ್ತು ದೀರ್ಘ ಶೀರ್ಷಿಕೆಯ ತಿದ್ದುಪಡಿ.-** ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 16)ರ (ಇಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಿದೆ) ಶೀರ್ಷಿಕೆ ಮತ್ತು ದೀರ್ಘ ಶೀರ್ಷಿಕೆಯಲ್ಲಿ "ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ" ಎಂಬ ಪದಗಳ ಬದಲಿಗೆ "ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**3. ಪ್ರಕರಣದ 1ರ ತಿದ್ದುಪಡಿ.-** ಮೂಲ ಅಧಿನಿಯಮದ 1ನೇ ಪ್ರಕರಣದ (1)ನೇ ಉಪಪ್ರಕರಣದಲ್ಲಿ "ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ" ಎಂಬ ಪದಗಳ ಬದಲಿಗೆ "ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**4. ಪ್ರಕರಣ 2ರ ತಿದ್ದುಪಡಿ.-** ಮೂಲ ಅಧಿನಿಯಮದ 2ನೇ ಪ್ರಕರಣದಲ್ಲಿ,-

(1) (ಎ) ಖಂಡದಲ್ಲಿ "ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ" ಎಂಬ ಪದಗಳ ಬದಲಿಗೆ "ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) (ಡಿಎ) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

(ಡಿಎ) "ನಿರ್ದೇಶಕ" ಎಂದರೆ,-

(i) ಎಸ್‌ಎಸ್‌ಎಲ್‌ಸಿ ಮತ್ತು ಇತರ ಪರೀಕ್ಷೆಗಳ ಸಂಬಂಧದಲ್ಲಿ ನಿರ್ದೇಶಕ (ಪರೀಕ್ಷೆಗಳು); ಮತ್ತು

(ii) ಪದವಿ ಪೂರ್ವ ಪರೀಕ್ಷೆಗಳ ಸಂಬಂಧದಲ್ಲಿ ನಿರ್ದೇಶಕ (ಪಪೂ ಪರೀಕ್ಷೆಗಳು).

-ಇವರನ್ನು ಒಳಗೊಳ್ಳುವುದು".

(3) (ಐ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಐಎ) "ಪ್ರಾಂಶುಪಾಲ" ಎಂದರೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಮತ್ತು ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲ ಅಥವಾ ಮಾನ್ಯತೆ ಪಡೆದ ಪದವಿ ಪೂರ್ವ ಕಾಲೇಜುಗಳ ಪ್ರಾಂಶುಪಾಲ."

(4) (ಜೆ) ಖಂಡದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಜೆಎ) "ಹಿರಿಯ ಪ್ರೌಢಶಾಲೆ" ಎಂದರೆ ಯಾವುದೇ ಮಾನ್ಯತೆ ಪಡೆದ ಪದವಿ ಪೂರ್ವ ಕಾಲೇಜುಗಳನ್ನು ಒಳಗೊಂಡಂತೆ ಸರ್ಕಾರಿ ಪದವಿ ಪೂರ್ವ ಕಾಲೇಜುಗಳು ಮತ್ತು ಸಂಯುಕ್ತ ಪದವಿ ಪೂರ್ವ ಕಾಲೇಜುಗಳು."

(5) (ಒ) ಖಂಡದ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಒ) "ಉಪಾಧ್ಯಕ್ಷ" ಎಂದರೆ,-

(i) ಎಸ್ಎಸ್ಎಲ್ಸಿ ಮತ್ತು ಇತರ ಪರೀಕ್ಷೆಗಳ ಸಂಬಂಧದಲ್ಲಿ ಉಪಾಧ್ಯಕ್ಷ-1; ಮತ್ತು

(ii) ಪದವಿ ಪೂರ್ವ ಪರೀಕ್ಷೆಗಳ ಸಂಬಂಧದಲ್ಲಿ ಉಪಾಧ್ಯಕ್ಷ-2."

**5. ಪ್ರಕರಣ 3ರ ತಿದ್ದುಪಡಿ.-** ಮೂಲ ಅಧಿನಿಯಮದ 3ನೇ ಪ್ರಕರಣದಲ್ಲಿ,-

(1) ಉಪಪ್ರಕರಣ (1)ರಲ್ಲಿ "ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ" ಎಂಬ ಪದಗಳ ಬದಲಿಗೆ "ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

(2) ಉಪಪ್ರಕರಣ (2)ರಲ್ಲಿ "ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ" ಎಂಬ ಪದಗಳ ಬದಲಿಗೆ "ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು.

**6. ಪ್ರಕರಣ 4ರ ತಿದ್ದುಪಡಿ.-** ಮೂಲ ಅಧಿನಿಯಮದ 4ನೇ ಪ್ರಕರಣದಲ್ಲಿ,-

(1) ಉಪಪ್ರಕರಣ (1)ರಲ್ಲಿ "ಸಾರ್ವಜನಿಕ ಶಿಕ್ಷಣದ ಕಮೀಷನರು ಮಂಡಳಿಯ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು" ಎಂಬ ಪದಗಳ ಬದಲಿಗೆ "ಮಂಡಲಿಯ ಅಧ್ಯಕ್ಷರನ್ನು ಸರ್ಕಾರವು ಐಎಎಸ್ (ಆಯ್ಕೆ ಶ್ರೇಣಿ ಅಥವಾ ಕಿರಿಯ ಆಡಳಿತ ಶ್ರೇಣಿ) ವೃಂದದಿಂದ ನೇಮಕ ಮಾಡತಕ್ಕದ್ದು" ಎಂಬ ಪದಗಳು, ಅಕ್ಷರಗಳು ಮತ್ತು ಆವರಣ ಚಿಹ್ನೆಗಳನ್ನು ಪ್ರತಿಯೋಜಿಸತಕ್ಕದ್ದು.

(2) ಉಪಪ್ರಕರಣ (1)ರ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(1ಎ) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಮತ್ತು ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಇವರು ಮಂಡಲಿಯ ವಿಶೇಷ ಆಹ್ವಾನಿತರಾಗಿರತಕ್ಕದ್ದು."

(3) ಉಪಪ್ರಕರಣ (2)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(2) ಸರ್ಕಾರವು ಅಧಿಸೂಚನೆಯ ಮೂಲಕ ನೇಮಕ ಮಾಡಲಾಗುವ ನಿರ್ದೇಶಕ-1, ಸಾರ್ವಜನಿಕ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಅಧಿಕಾರಿಯಾಗಿರತಕ್ಕದ್ದು ಹಾಗೂ ನಿರ್ದೇಶಕ-2, ಪದವಿಪೂರ್ವ ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಅಧಿಕಾರಿಯಾಗಿರತಕ್ಕದ್ದು. ಅವರು ಮಂಡಲಿಯ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ರಾಜ್ಯ ಸರ್ಕಾರದ ಇಚ್ಛೆಪರ್ಯಂತ ಪದವನ್ನು ಹೊಂದಿರತಕ್ಕದ್ದು."

(4) ಉಪಪ್ರಕರಣ (4)ರಲ್ಲಿ,-

(i) '(ಎ) ಪದನಿಮಿತ್ತ ಸದಸ್ಯರು' ಎಂಬ ಶೀರ್ಷಿಕೆಯಡಿಯಲ್ಲಿ,-

(ಎ) ಖಂಡ (ಎ) ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(ಎ) ಸಾರ್ವಜನಿಕ ಶಿಕ್ಷಣ ಅಪರ ಆಯುಕ್ತರು, ಧಾರವಾಡ ಮತ್ತು ಕಲಬುರಗಿ.";

(ಬಿ) ಖಂಡ (ಡಿ)ಯಲ್ಲಿ "ಕೃಷಿ ಇಲಾಖೆಯ" ಎಂಬ ಪದಗಳ ಬದಲಿಗೆ "ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಕೌಶಲ್ಯಾಭಿವೃದ್ಧಿ ಇಲಾಖೆಯ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) ಖಂಡ (ಡಿಇ) ಯನ್ನು ಬಿಟ್ಟುಬಿಡತಕ್ಕದ್ದು; ಮತ್ತು

(ಡಿ) ಖಂಡ (ಇ) ಯನ್ನು ಬಿಟ್ಟುಬಿಡತಕ್ಕದ್ದು.

(ii) '(ಬಿ) ಚುನಾಯಿತ ಸದಸ್ಯರು' ಎಂಬ ಶೀರ್ಷಿಕೆ ಹಾಗೂ ಅದರ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

(iii) '(ಸಿ) ನಾಮನಿರ್ದೇಶಿತ ಸದಸ್ಯರು' ಎಂಬ ಶೀರ್ಷಿಕೆಯಡಿಯಲ್ಲಿ,-

(ಎ) ಖಂಡ (ಎ) ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎಎ) ಹಿರಿಯ ಪ್ರೌಢಶಾಲೆಯ ಪ್ರಾಂಶುಪಾಲ ಅಥವಾ ಉಪನ್ಯಾಸಕರ ಪೈಕಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಇಬ್ಬರು ಸದಸ್ಯರು.";

(ಬಿ) ಖಂಡ (ಸಿ) ಯಲ್ಲಿ "ಪ್ರೌಢಶಾಲಾ ಶಿಕ್ಷಕರ ತರಬೇತಿ ಕಾಲೇಜುಗಳ" ಎಂಬ ಪದಗಳ ಬದಲಿಗೆ "ಶಿಕ್ಷಕರ ತರಬೇತಿ ಕಾಲೇಜುಗಳ" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(ಸಿ) ಖಂಡ (ಡಿ) ಯಲ್ಲಿ "ಪ್ರಾಥಮಿಕ ಶಿಕ್ಷಕರ ತರಬೇತಿ ಕಾಲೇಜುಗಳ ಮುಖ್ಯಸ್ಥರಲ್ಲಿ ಇಬ್ಬರು" ಎಂಬ ಪದಗಳ ಬದಲಿಗೆ "ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಯ ಮುಖ್ಯಸ್ಥರಲ್ಲಿ ಒಬ್ಬರು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ಡಿ) ಖಂಡ (ಇ) ಯಲ್ಲಿ "ಆರು ವ್ಯಕ್ತಿಗಳು" ಎಂಬ ಪದಗಳ ಬದಲಿಗೆ "ಇಬ್ಬರು ವ್ಯಕ್ತಿಗಳು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು;

(iv) ಪರಂತುಕವನ್ನು ಬಿಟ್ಟುಬಿಡತಕ್ಕದ್ದು.

**7. ಪ್ರಕರಣ 15ರ ತಿದ್ದುಪಡಿ.-** ಮೂಲ ಅಧಿನಿಯಮದ 15ನೇ ಪ್ರಕರಣದ (ಎ) ಖಂಡದಲ್ಲಿನ (iv)ನೇ ಬಾಬುವಿನ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(v) ಪದವಿ-ಪೂರ್ವ ಪರೀಕ್ಷೆಯನ್ನು; ಮತ್ತು

(vi) ಶಾಲಾ-ಪೂರ್ವ ಶಿಕ್ಷಣ ಡಿಪ್ಲೋಮ."

**8. ಪ್ರಕರಣ 17ರ ತಿದ್ದುಪಡಿ.-** ಮೂಲ ಅಧಿನಿಯಮದ 17ನೇ ಪ್ರಕರಣದಲ್ಲಿ,-

(1) ಉಪಪ್ರಕರಣ (2)ರಲ್ಲಿ "ಮತ್ತು ಅದರ" ಎಂಬ ಪದಗಳ ತರುವಾಯ "ಸಂಬಂಧಿತ" ಎಂಬ ಪದವನ್ನು ಸೇರಿಸತಕ್ಕದ್ದು.

(2) ಉಪಪ್ರಕರಣ (6)ರಲ್ಲಿ "ಅವನ ಕರ್ತವ್ಯಗಳನ್ನು ಉಪಾಧ್ಯಕ್ಷನು" ಎಂಬ ಪದಗಳ ಮೊದಲು "ಅಧ್ಯಕ್ಷನ ನಿರ್ದೇಶನದಂತೆ " ಎಂಬ ಪದಗಳನ್ನು ಸೇರಿಸತಕ್ಕದ್ದು.

**9. ಪ್ರಕರಣ 18ರ ತಿದ್ದುಪಡಿ.-** ಮೂಲ ಅಧಿನಿಯಮದ 18ನೇ ಪ್ರಕರಣದಲ್ಲಿ,-

(1) ಉಪಪ್ರಕರಣ(1)ರ ಬದಲಿಗೆ ಈ ಮುಂದಿನದನ್ನು ಪ್ರತಿಯೋಜಿಸತಕ್ಕದ್ದು, ಎಂದರೆ:-

"(1) ಮಂಡಲಿಯು, ರಾಜ್ಯ ಸರ್ಕಾರವು ನೇಮಕ ಮಾಡುವ ಇಬ್ಬರು ಕಾರ್ಯದರ್ಶಿಗಳನ್ನು ಹೊಂದಿರತಕ್ಕದ್ದು, ಆ ಪೈಕಿ ಒಬ್ಬರು ಜಂಟಿ ನಿರ್ದೇಶಕರ ದರ್ಜೆಗಿಂತ ಕಡಿಮೆಯಲ್ಲದ ಸಾರ್ವಜನಿಕ ಶಿಕ್ಷಣ ಇಲಾಖೆಯ ಅಧಿಕಾರಿಯಾಗಿರತಕ್ಕದ್ದು ಮತ್ತು ಇನ್ನೊಬ್ಬರು ಜಂಟಿ ನಿರ್ದೇಶಕರ ದರ್ಜೆಗೆ ಕಡಿಮೆಯಲ್ಲದ ಪದವಿಪೂರ್ವ ಶಿಕ್ಷಣ ಇಲಾಖೆಯ ಅಧಿಕಾರಿಯಾಗಿರತಕ್ಕದ್ದು.

(1ಎ) ಪ್ರಶ್ನೆ ಪತ್ರಿಕೆಗಳ ಸಿದ್ಧಪಡಿಸುವಿಕೆ, ವಿತರಣೆ ಹಾಗೂ ಗೌಪ್ಯತೆ ಕಾಪಾಡುವುದು ಸಂಬಂಧಪಟ್ಟ ಪರೀಕ್ಷಾ ನಿರ್ದೇಶಕರ (ಕಾರ್ಯದರ್ಶಿ) ಆದ್ಯಕರ್ತವ್ಯವಾಗಿರುತ್ತದೆ. ಮಂಡಲಿಯ ಯಾರೇ ಪ್ರಾಧಿಕಾರಿ ಅಥವಾ ಸದಸ್ಯನು ಅಥವಾ ಯಾರೇ ಆಗಲಿ ಈ ವಿಷಯದಲ್ಲಿ ಹಸ್ತಕ್ಷೇಪ ಮಾಡತಕ್ಕದ್ದಲ್ಲ."

(2) ಉಪಪ್ರಕರಣ (2)ರಲ್ಲಿ "ನಿರ್ದೇಶಕನ" ಎಂಬ ಪದದ ಬದಲಿಗೆ "ಅಧ್ಯಕ್ಷನ" ಎಂಬ ಪದವನ್ನು ಪ್ರತಿಯೋಜಿಸತಕ್ಕದ್ದು.

**10. ಪ್ರಕರಣ 24ರ ತಿದ್ದುಪಡಿ.-** ಮೂಲ ಅಧಿನಿಯಮದ 24ನೇ ಪ್ರಕರಣದಲ್ಲಿ ಉಪಪ್ರಕರಣ (2)ರ ತರುವಾಯ ಈ ಮುಂದಿನ ಉಪಪ್ರಕರಣವನ್ನು ಸೇರಿಸತಕ್ಕದ್ದು, ಎಂದರೆ:-

"(3) ಮಂಡಲಿಯು, ನೋಂದಾಯಿತ ಚಾರ್ಟರ್ಡ್ ಅಕೌಂಟೆಂಟ್-ನ ಮೂಲಕ ಮಂಡಲಿಯ ಲೆಕ್ಕಪತ್ರಗಳ ಆಂತರಿಕ ಲೆಕ್ಕಪರಿಶೋಧನೆಯನ್ನು ನಡೆಸುವಂತೆ ಮಾಡತಕ್ಕದ್ದು ಮತ್ತು ಲೆಕ್ಕಪರಿಶೋಧನೆಗೆ ಅಗತ್ಯವಾದಂಥ ಶುಲ್ಕವನ್ನು ಪಾವತಿಸತಕ್ಕದ್ದು."

**11. ಪ್ರಕರಣ 29ನ್ನು ಬಿಟ್ಟುಬಿಡುವುದು.-** ಮೂಲ ಅಧಿನಿಯಮದ 29ನೇ ಪ್ರಕರಣವನ್ನು ಬಿಟ್ಟುಬಿಡತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಈ ಮುಂದಿನವುಗಳಿಗಾಗಿ,-

(1) ಹೊಸ ಶಿಕ್ಷಣ ನೀತಿ 2020ರ ಅನುಸಾರವಾಗಿ ಕರ್ನಾಟಕ ಪ್ರೌಢಶಿಕ್ಷಣ ಪರೀಕ್ಷಾ ಮಂಡಲಿಯ ಹೆಸರನ್ನು ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯನಿರ್ಣಯ ಮಂಡಲಿ ಎಂದು ಬದಲಾಯಿಸಲು;

(2) ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯನಿರ್ಣಯ ಮಂಡಲಿಯ ಮುಖಾಂತರ ಎಸ್ ಎಸ್ ಎಲ್ ಸಿ ಮತ್ತು ಇತರೆ ಸಾರ್ವಜನಿಕ ಪರೀಕ್ಷೆಗಳ ಜೊತೆಗೆ ಪದವಿ ಪೂರ್ವ ಪರೀಕ್ಷೆಯನ್ನು ನಡೆಸಲು; ಮತ್ತು

(3) ಸಮೂಹ ಶಿಕ್ಷಣ ನಿರ್ದೇಶಕರ ಹುದ್ದೆಯನ್ನು ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯನಿರ್ಣಯ ಮಂಡಳಿಯ ಅಧ್ಯಕ್ಷರು ಎಂದು ಮರು ಪದನಾಮೀಕರಿಸಲು,

- ಇತರೆ ಕೆಲವು ಪ್ರಾಸಂಗಿಕ ಮತ್ತು ಆನುಷಂಗಿಕ ತಿದ್ದುಪಡಿಗಳನ್ನು ಮಾಡಲು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ ಅಧಿನಿಯಮ, 1966 (1966ರ ಕರ್ನಾಟಕ ಅಧಿನಿಯಮ 16)ನ್ನು ತಿದ್ದುಪಡಿ ಮಾಡುವುದು ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ, ಈ ವಿಧೇಯಕ.

## ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಪ್ರತಿ ವರ್ಷ ಅಂದಾಜು ರೂ.2.00 ಲಕ್ಷಗಳ ಆವರ್ತಕ ವೆಚ್ಚವನ್ನು ಒಳಗೊಳ್ಳುವುದು.

**ಬಿ.ಸಿ. ನಾಗೇಶ**
ಶಾಲಾ ಶಿಕ್ಷಣ ಮತ್ತು ಸಾಕ್ಷರತೆ
ಹಾಗೂ ಸಕಾಲ ಮಂತ್ರಿ

**ಎಂ.ಕೆ. ವಿಶಾಲಾಕ್ಷಿ**
ಕಾರ್ಯದರ್ಶಿ
ಕರ್ನಾಟಕ ವಿಧಾನಸಭೆ

**ಅನುಬಂಧ**
**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ ಅಧಿನಿಯಮ, 1966ರ**
**(1966ರ ಕರ್ನಾಟಕ ಅಧಿನಿಯಮ 16) ಉದ್ಧೃತ ಭಾಗ**

**XX XX XX**

**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ ಅಧಿನಿಯಮ, 1966**
**(1966ರ ಏಪ್ರಿಲ್ ಇಪ್ಪತ್ತೇಳನೇ ದಿನಾಂಕದಂದು ರಾಜ್ಯಪಾಲರ ಅನುಮತಿ ಪಡೆಯಲಾಗಿದೆ)**

ಕರ್ನಾಟಕ ರಾಜ್ಯಕ್ಕಾಗಿ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿಯನ್ನು ಸ್ಥಾಪಿಸಲು ಉಪಬಂಧಿಸುವ ಅಧಿನಿಯಮ.

ಕೆಲವು ಸಾರ್ವತ್ರಿಕ ಪರೀಕ್ಷೆಗಳನ್ನು ನಡೆಸುವ ಮತ್ತು ನಿರ್ವಹಿಸುವ ಉದ್ದೇಶಕ್ಕಾಗಿ ಒಂದು ಮಂಡಲಿಯನ್ನು ಸ್ಥಾಪಿಸುವುದು ವಿಹಿತವಾಗಿರುವುದರಿಂದ;

ಭಾರತ ಗಣರಾಜ್ಯದ ಹದಿನೇಳನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನ ಮಂಡಲದಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ ಅಧಿನಿಯಮ, 1966 ಎಂದು ಕರೆಯತಕ್ಕದ್ದು.

**XX XX XX**

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) ``ಮಂಡಲಿ'' ಎಂದರೆ ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ;

**XX XX XX**

(ಡಿಎ) ``ನಿರ್ದೇಶಕ'' ಎಂದರೆ ಮಂಡಲಿಯ ನಿರ್ದೇಶಕರು;

**XX XX XX**

(ಓ) ``ಉಪಾಧ್ಯಕ್ಷ'' ಎಂದರೆ ಮಂಡಲಿಯ ಉಪಾಧ್ಯಕ್ಷ.

**XX XX XX**

**3. ಮಂಡಲಿಯ ನಿಗಮನ.-** (1) ರಾಜ್ಯ ಸರ್ಕಾರವು, ಆದಷ್ಟು ಬೇಗನೆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದಿನಾಂಕದಿಂದ ಜಾರಿಗೆ ಬರುವಂತೆ ಅಧಿಸೂಚನೆಯ ಮೂಲಕ, ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿಯನ್ನು ಸ್ಥಾಪಿಸತಕ್ಕದ್ದು.

(2) ಮಂಡಲಿಯು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಲಿ ಎಂಬ ಹೆಸರಿನ ಒಂದು ನಿಗಮಿತ ನಿಕಾಯವಾಗಿರತಕ್ಕದ್ದು ಮತ್ತು ಇದು ಶಾಶ್ವತವಾದ ಉತ್ತರಾಧಿಕಾರವನ್ನು ಮತ್ತು ಸಾಮಾನ್ಯ ಮೊಹರನ್ನು ಹೊಂದಿರತಕ್ಕದ್ದು ಮತ್ತು ನಿಗಮಿತದ ಹೆಸರಿನಿಂದ ದಾವೆ ಹೂಡಬಹುದು ಮತ್ತು ದಾವೆಗೆ ಗುರಿಯಾಗಬಹುದು ಮತ್ತು ಇದು ಚರ ಮತ್ತು ಸ್ಥಿರ ಸ್ವತ್ತನ್ನು ಆರ್ಜಿಸಲು ಮತ್ತು ಧಾರಣ ಮಾಡಲು ಮತ್ತು ನಿಯಮಿಸಬಹುದಾದಂಥ ನಿರ್ಬಂಧಗಳು ಮತ್ತು ಷರತ್ತುಗಳಿಗೊಳಪಟ್ಟು ಅದರಲ್ಲಿ ನಿಹಿತವಾಗಿರಬಹುದಾದಂಥ ಅಥವಾ ಅದು ಆರ್ಜಿಸಿರಬಹುದಾದಂಥ ಚರ ಅಥವಾ ಸ್ಥಿರ ಸ್ವತ್ತನ್ನು ಗುತ್ತಿಗೆಗೆ ಕೊಡಲು, ಮಾರಾಟ ಮಾಡಲು ಅಥವಾ ಅನ್ಯಥಾ ವರ್ಗಾಯಿಸಲು ಮತ್ತು ಕರಾರು ಮಾಡಿಕೊಳ್ಳಲು ಮತ್ತು ಈ ಅಧಿನಿಯಮದ ಉದ್ದೇಶಗಳಿಗಾಗಿ ಅವಶ್ಯವಾದ ಎಲ್ಲಾ ಕಾರ್ಯಗಳನ್ನು ಮಾಡಲು ಸಕ್ಷಮವಾಗಿರತಕ್ಕದ್ದು.

**XX XX XX**

**4. ಮಂಡಲಿಯ ರಚನೆ.-** (1) ಮಂಡಲಿಯು ಈ ಪ್ರಕರಣದಲ್ಲಿ ನಿರ್ದಿಷ್ಟಪಡಿಸಿದಂತೆ ಅಧ್ಯಕ್ಷ, ಉಪಾಧ್ಯಕ್ಷ ಮತ್ತು ಸದಸ್ಯರನ್ನು ಒಳಗೊಂಡಿರತಕ್ಕದ್ದು. ಸಾರ್ವಜನಿಕ ಶಿಕ್ಷಣದ ಕಮೀಷನರು ಮಂಡಳಿಯ ಪದನಿಮಿತ್ತ ಅಧ್ಯಕ್ಷರಾಗಿರತಕ್ಕದ್ದು.

(2) ನಿರ್ದೇಶಕನು, ರಾಜ್ಯ ಸರ್ಕಾರವು ಅಧಿಸೂಚನೆಯ ಮೂಲಕ ನೇಮಕ ಮಾಡಿದ ಹೆಚ್ಚುವರಿ ನಿರ್ದೇಶಕನ ದರ್ಜೆಗೆ ಕಡಿಮೆಯಿಲ್ಲದ ದರ್ಜೆಯ ಸಾರ್ವಜನಿಕ ಶಿಕ್ಷಣ ಇಲಾಖೆಯ ಒಬ್ಬ ಅಧಿಕಾರಿಯಾಗಿರತಕ್ಕದ್ದು. ಅವನು ಮಂಡಲಿಯ ಪೂರ್ಣಕಾಲಿಕ ಅಧಿಕಾರಿಯಾಗಿರತಕ್ಕದ್ದು ಮತ್ತು ಅವನು ರಾಜ್ಯ ಸರ್ಕಾರದ ಇಷ್ಟಪರ್ಯಂತ ಪದಧಾರಣ ಮಾಡತಕ್ಕದ್ದು.

**XX XX XX**

(4) ಮಂಡಲಿಯು ಈ ಕೆಳಕಂಡ ಸದಸ್ಯರನ್ನು ಸಹ ಒಳಗೊಂಡಿರತಕ್ಕದ್ದು:-

(ಎ) ಪದನಿಮಿತ್ತ ಸದಸ್ಯರು:

(ಎ) ಮಂಡಳಿಯ ಸಾರ್ವಜನಿಕ ಶಿಕ್ಷಣದ ವಿಭಾಗೀಯ ಕಾರ್ಯದರ್ಶಿಗಳು ಮತ್ತು ಪದನಿಮಿತ್ತ ಜಂಟಿ ನಿರ್ದೇಶಕರುಗಳು;

**XX XX XX**

(ಡಿ) ರಾಜ್ಯ ಸರ್ಕಾರವು ಹೆಸರಿಸಿದ ಕೃಷಿ ಇಲಾಖೆಯ ಒಬ್ಬ ಅಧಿಕಾರಿ;

**XX XX XX**

(ಡಿಇ) ಇತರ ಪರೀಕ್ಷೆಗಳ ಮಂಡಳಿಯ ಪ್ರಭಾರದಲ್ಲಿರುವ ನಿರ್ದೇಶಕ;

**XX XX XX**

(ಇ) ರಾಜ್ಯ ಸರ್ಕಾರವು ಹೆಸರಿಸಿದ ವಾಣಿಜ್ಯ ಶಿಕ್ಷಣ, ಗೃಹವಿಜ್ಞಾನ, ಶಿಕ್ಷಣ, ಕಲೆ ಮತ್ತು ಕುಶಲಕಲೆ, ಸಂಗೀತ, ನಾಟಕ ಮತ್ತು ನೃತ್ಯ, ಹಿಂದಿ ಶಿಕ್ಷಣ, ಸಂಸ್ಕೃತ ಶಿಕ್ಷಣ, ರಾಜ್ಯ ಶಿಕ್ಷಣ ಘಟಕ ಮತ್ತು ದೈಹಿಕ-ಶಿಕ್ಷಣ ಇವುಗಳ ಪ್ರಭಾರದಲ್ಲಿರುವ ಸಾರ್ವಜನಿಕ ಶಿಕ್ಷಣ ಇಲಾಖೆಯ ಎಂಟು ಮಂದಿ ಅಧಿಕಾರಿಗಳು.

(ಬಿ) ಚುನಾಯಿತ ಸದಸ್ಯರು:

ರಾಜ್ಯದಲ್ಲಿ ಕಾನೂನು ಮೂಲಕ ಸ್ಥಾಪಿಸಿದ ಪ್ರತಿಯೊಂದು ವಿಶ್ವವಿದ್ಯಾನಿಯಲಯದ ಅಕೆಡೆಮಿಕ್ ಕೌನ್ಸಿಲ್‌ಗಳ ಸದಸ್ಯರು ತಮ್ಮ ಪೈಕಿ ನಿಯಮಿಸಿದ ರೀತಿಯಲ್ಲಿ ಚುನಾಯಿಸಿದ ಇಬ್ಬರು ಸದಸ್ಯರು.

(ಸಿ) ನಾಮನಿರ್ದೇಶಿತ ಸದಸ್ಯರು:

(ಎ) ಮನ್ನಣೆ ಪಡೆದ ಪೌಢಶಾಲೆಗಳ ಮುಖ್ಯೋಪಾಧ್ಯಾಯರು ಮತ್ತು ಮುಖ್ಯೋಪಾಧ್ಯಾಯಿನಿಯರ ಪೈಕಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಐವರು ಸದಸ್ಯರು;

(ಬಿ) ಮನ್ನಣೆ ಪಡೆದ ಪೌಢ ಶಾಲೆಗಳಲ್ಲಿ ಶಿಕ್ಷಕರಾಗಿ ಹತ್ತು ವರ್ಷಗಳಿಗೆ ಕಡಿಮೆ ಇಲ್ಲದಷ್ಟು ಸೇವೆ ಸಲ್ಲಿಸಿರುವ ಶಿಕ್ಷಕರ ಪೈಕಿ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ಐವರು ಸದಸ್ಯರು;

(ಸಿ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ರಾಜ್ಯದಲ್ಲಿನ ಪೌಢಶಾಲಾ ಶಿಕ್ಷಕರ ತರಬೇತಿ ಕಾಲೇಜುಗಳ ಪ್ರಾಂಶುಪಾಲರಲ್ಲಿ ಒಬ್ಬರು;

(ಡಿ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ ರಾಜ್ಯದಲ್ಲಿನ ಪ್ರಾಥಮಿಕ ಶಿಕ್ಷಕರ ತರಬೇತಿ ಕಾಲೇಜುಗಳ ಮುಖ್ಯಸ್ಥರಲ್ಲಿ ಇಬ್ಬರು;

(ಇ) ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಿದ, ಪೌಢ ಶಿಕ್ಷಣಕ್ಕೆ ಸಂಬಂಧಿಸಿದ ವಿಷಯಗಳಲ್ಲಿ ಅನುಭವ ಹೊಂದಿರು (ಮನ್ನಣೆ ಪಡೆದ ಪೌಢಶಾಲೆಗಳಲ್ಲಿ ಮುಖ್ಯೋಪಾಧ್ಯಾಯರು, ಮುಖ್ಯೋಪಾಧ್ಯಾಯನಿಯರು ಅಥವಾ ಶಿಕ್ಷಕರಾಗಿಲ್ಲದವರು) ಆರು ವ್ಯಕ್ತಿಗಳು:

ಪರಂತು, ಸದಸ್ಯನು,-

(i) ಅವನು (ಬಿ) ಪ್ಯಾರಾದ ಅಡಿಯಲ್ಲಿ ಚುನಾಯಿತನಾಗಿದ್ದರೆ ಮತ್ತು ಸಂಬಂಧಪಟ್ಟ ಅಕೆಡೆಮಿಕ್ ಕೌನ್ಸಿಲ್ ನ ಸದಸ್ಯನಾಗಿರುವುದು ನಿಂತುಹೋಗಿದ್ದರೆ;

(ii) (ಸಿ) ಪ್ಯಾರಾದ (ಎ) ಖಂಡದ ಮೇರೆಗೆ ಅಥವಾ (ಬಿ) ಖಂಡದ ಮೇರೆಗೆ ಅವನು ನಾಮನಿರ್ದೇಶಿತನಾಗಿದ್ದು, ಸಂದರ್ಭಾನುಸಾರ ಮನ್ನಣೆ ಪಡೆದ ಪೌಢಶಾಲೆಯ ಮುಖ್ಯೋಪಾಧ್ಯಾಯರಾಗಿರುವುದು ಅಥವಾ ಮುಖ್ಯೋಪಾಧ್ಯಾಯನಿಯಾಗಿರುವುದು ಅಥವಾ ಶಿಕ್ಷಕನಾಗಿರುವುದು ನಿಂತುಹೋಗಿದ್ದರೆ; ಮತ್ತು

(iii) (ಸಿ) ಪ್ಯಾರಾದ (ಸಿ) ಖಂಡದ ಮೇರೆಗೆ ಅಥವಾ (ಡಿ) ಖಂಡದ ಮೇರೆಗೆ ಅವನು ನಾಮನಿರ್ದೇಶಿತನಾಗಿದ್ದರೆ ಪೌಢಶಿಕ್ಷಕರತರಬೇತಿ ಕಾಲೇಜಿನ ಪ್ರಾಂಶುಪಾಲರಾಗಿರುವುದು ಅಥವಾ ಪ್ರಾಥಮಿಕ ಶಾಲಾ ತರಬೇತಿ ಕಾಲೇಜಿನ ಮುಖ್ಯಸ್ಥನಾಗಿರುವುದು ನಿಂತುಹೋಗಿದ್ದರೆ

- ಹಾಗೆ ಸದಸ್ಯನಾಗಿ ಪದಧಾರಣ ಮಾಡುವುದು ನಿಂತುಹೋಗತಕ್ಕದ್ದು.

**XX XX XX**

**15. ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು.-** ಈ ಅಧಿನಿಯಮದ ಉಪಬಂಧಗಳಿಗೊಳಪಟ್ಟು ಮಂಡಲಿಯ ಅಧಿಕಾರಗಳು ಮತ್ತು ಕರ್ತವ್ಯಗಳು ಈ ಕೆಳಕಂಡಂತೆ ಇರತಕ್ಕದ್ದು, ಎಂದರೆ:-

(ಎ) (i) ಕರ್ನಾಟಕ ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್ ಪರೀಕ್ಷೆ;

(ii) ಟೀಚರ್ಸ್ ಸರ್ಟಿಫಿಕೇಟ್ ಪರೀಕ್ಷೆ (ಹೈಯರ್)ಯನ್ನು;

(iii) ಟೀಚರ್ಸ್ ಸರ್ಟಿಫಿಕೇಟ್ ಪರೀಕ್ಷೆ (ಲೋಯರ್)ಯನ್ನು;

(iv) ರಾಜ್ಯ ಸರ್ಕಾರವು ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ ನಿರ್ದಿಷ್ಟಪಡಿಸಬಹುದಾದಂಥ ಯಾವುದೇ ಇತರ ಪರೀಕ್ಷೆಯನ್ನು,

- ನಡೆಸುವುದು;

**XX XX XX**

**17. ಅಧ್ಯಕ್ಷನ ಅಧಿಕಾರಗಳು ಮತ್ತು ಕರ್ತವ್ಯಗಳು.-**

**XX XX XX**

(2) ನಿರ್ದೇಶಕನು ಮಂಡಲಿಯ ಪ್ರಧಾನ ಕಾರ್ಯನಿರ್ವಾಹಕ ಅಧಿಕಾರಿಯಾಗಿರತಕ್ಕದ್ದು ಮತ್ತು ಅದರ ವ್ಯವಹಾರಗಳ ಮೇಲೆ ಅವನಿಗೆ ಸಾಮಾನ್ಯ ನಿಯಂತ್ರಣದ, ಮೇಲ್ವಿಚಾರಣೆ ಮಾಡುವ ಮತ್ತು ಪರಿಶೀಲಿಸುವ ಅಧಿಕಾರವಿರತಕ್ಕದ್ದು. ಈ ಅಧಿನಿಯಮದ, ನಿಯಮಗಳ, ವಿನಿಯಮಗಳ ಮತ್ತು ಉಪವಿಧಿಗಳ ಉಪಬಂಧಗಳನ್ನು ಕ್ರಮಬದ್ಧವಾಗಿ ಪಾಲಿಸುವುದನ್ನು ಖಚಿತಪಡಿಸಿ ಕೊಳ್ಳುವುದು ಅವನ ಕರ್ತವ್ಯವಾಗಿರತಕ್ಕದ್ದು ಮತ್ತು ಅವನು ಆ ಉದ್ದೇಶಕ್ಕಾಗಿ ಅವಶ್ಯಕವಾದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ಅವುಗಳನ್ನು ಚಲಾಯಿಸತಕ್ಕದ್ದು.

**XX XX XX**

(6) ಅನಾರೋಗ್ಯದ ಅಥವಾ ಮಂಡಲಿಗೆ ಸಂಬಂಧಿಸಿದಂತೆ ಇತರ ಕರ್ತವ್ಯದಲ್ಲಿ ಪ್ರತಿನಿಯೋಜನೆ ಮೇಲಿರುವ ಕಾರಣದಿಂದಾಗಿ ರಜೆಯ ಮೇಲೆ ಇರುವಾಗ ಅಥವಾ ಯಾವುದೇ ರೀತಿಯಲ್ಲಿ ಉಂಟಾದ ಖಾಲಿಸ್ಥಾನವನ್ನು ಭರ್ತಿ ಮಾಡುವವರೆಗೆ ಅಧ್ಯಕ್ಷನ ಗೈರುಹಾಜರಿಯ ಅವಧಿಯಲ್ಲಿ ಅವನ ಕರ್ತವ್ಯಗಳನ್ನು ಉಪಾಧ್ಯಕ್ಷನು ನೆರವೇರಿಸತಕ್ಕದ್ದು ಮತ್ತು ಉಪಾಧ್ಯಕ್ಷನ ಗೈರುಹಾಜರಿಯಲ್ಲಿ ರಾಜ್ಯ ಸರ್ಕಾರವು ನಿರ್ದೇಶಿಸಬಹುದಾದಂಥ ಸದಸ್ಯನು ಅವುಗಳನ್ನು ನೆರವೇರಿಸತಕ್ಕದ್ದು.

**XX XX XX**

**18. ಕಾರ್ಯದರ್ಶಿಯ ನೇಮಕಾತಿ, ಅಧಿಕಾರಗಳು ಮತ್ತು ಕರ್ತವ್ಯಗಳು.-** (1) ಮಂಡಲಿಯು, ಒಬ್ಬ ಕಾರ್ಯದರ್ಶಿಯನ್ನು ಹೊಂದಿರತಕ್ಕದ್ದು. ಅವನು ರಾಜ್ಯ ಸರ್ಕಾರದಿಂದ ನೇಮಕಗೊಂಡ ಸಾರ್ವಜನಿಕ ಶಿಕ್ಷಣದ ಉಪನಿರ್ದೇಶಕನ ದರ್ಜೆಗಿಂತ ಕಡಿಮೆಯಿಲ್ಲದ ದರ್ಜೆಯ ಆ ಇಲಾಖೆಯ ಒಬ್ಬ ಅಧಿಕಾರಿಯಾಗಿರತಕ್ಕದ್ದು.

(2) ಕಾರ್ಯದರ್ಶಿಯು, ನಿರ್ದೇಶಕನ ನಿಯಂತ್ರಣಕ್ಕೊಳಪಟ್ಟು ನಿಯಮಿಸಬಹುದಾದ ಅಧಿಕಾರಗಳನ್ನು ಚಲಾಯಿಸತಕ್ಕದ್ದು ಮತ್ತು ಅಂಥ ಕರ್ತವ್ಯಗಳನ್ನು ನೆರವೇರಿಸತಕ್ಕದ್ದು.

**XX XX XX**

**24. ಮಂಡಲಿಯ ನಿಧಿ.-** (1) ಮಂಡಲಿಯು ತನ್ನದೇ ಆದ ನಿಧಿಯನ್ನು ಹೊಂದಿರತಕ್ಕದ್ದು ಮತ್ತು ಈ ಕೆಳಕಂಡ ಹಣವನ್ನು ಅದರ ಖಾತೆಗೆ ಜಮೆ ಮಾಡತಕ್ಕದ್ದು:-

(ಎ) ಮಂಡಲಿಯು ವಿಧಿಸಿದ ಫೀಜುಗಳು ಮತ್ತು ಚಾರ್ಜುಗಳು;

(ಬಿ) ರಾಜ್ಯ ಸರ್ಕಾರವು ಸಂದಾಯ ಮಾಡಿದ ವಂತಿಗೆ ಯಾವುದಾದರೂ ಇದ್ದರೆ ಅದು; ಮತ್ತು

(ಸಿ) ಮಂಡಲಿಯು ಅಥವಾ ಮಂಡಲಿಯ ಪರವಾಗಿ ಸ್ವೀಕರಿಸಿದ ಯಾವುದೇ ಹಣ.

(2) ಮಂಡಲಿಯ ನಿಧಿಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ಅಧಿನಿಯಮ, 1924 ರಲ್ಲಿ ಪರಿಭಾಷಿಸಿರುವಂಥ ಅನುಸೂಚಿತ ಬ್ಯಾಂಕಿನಲ್ಲಿ ಇಡತಕ್ಕದ್ದು ಅಥವಾ ಮಂಡಲಿಯ ವಿವೇಚನಾನುಸಾರ ಅದನ್ನು ಭಾರತ ನ್ಯಾಸಗಳ ಅಧಿನಿಯಮ, 1882ರ ಮೂಲಕ ಅಧಿಕೃತಗೊಳಿಸಿದ ಭದ್ರತಾ ಪತ್ರಗಳಲ್ಲಿ ತೊಡಗಿಸತಕ್ಕದ್ದು.

**XX XX XX**

**29. ವಿಶ್ವವಿದ್ಯಾನಿಲಯದ ಪ್ರತಿನಿಧಿಗಳ ಮೊದಲ ನೇಮಕಾತಿ.-** 4ನೇ ಪ್ರಕರಣದಲ್ಲಿ ಏನೇ ಇದ್ದರೂ, 4ನೇ ಪ್ರಕರಣದ, (4)ನೇ ಉಪ-ಪ್ರಕರಣದ (ಬಿ) ಖಂಡದ ಮೇರೆಗಿನ ಸದಸ್ಯರನ್ನು ಮೊದಲಬಾರಿಗೆ ಮಂಡಲಿಯನ್ನು ರಚಿಸಿದ ತರುವಾಯ ರಾಜ್ಯ ಸರ್ಕಾರವು ನಾಮನಿರ್ದೇಶನ ಮಾಡಬಹುದು. ಆದರೆ, ಹಾಗೆ ನಾಮನಿರ್ದೇಶಿತರಾದ ಸದಸ್ಯರು, ಆ ಖಂಡದಲ್ಲಿ ಉಪಬಂಧಿಸಿದಂತೆ ಚುನಾಯಿತರಾದ ಸದಸ್ಯರು, ಅವರಿಗೆ ಬದಲಾಗಿ ಬರುವವರೆಗೆ ಪದಧಾರಣ ಮಾಡತಕ್ಕದ್ದು ಮತ್ತು ಹಾಗೆ ಚುನಾಯಿತರಾದ ಸದಸ್ಯರು, ನಾಮನಿರ್ದೇಶಿತ ಸದಸ್ಯರನ್ನು ಬದಲಾಯಿಸದಿದ್ದರೆ ಅವರು ಪದಧಾರಣ ಮಾಡಬಹುದಾಗಿದ್ದ ಅವಧಿಯವರೆಗೆ ಮಾತ್ರ ಪದಧಾರಣ ಮಾಡತಕ್ಕದ್ದು.

**XX XX XX**

ಸರ್ಕಾರಿ ಮುದ್ರಣಾಲಯ, ವಿಕಾಸಸೌಧ ಘಟಕ, ಬೆಂಗಳೂರು, ಪಿ7, ಕಾಸೂ , ಪ್ರತಿಗಳು 500, 21ನೇ ಸೆಪ್ಟೆಂಬರ್, 2022

**KARNATAKA LEGISLATIVE ASSEMBLY**
**FIFTEENTH LEGISLATIVE ASSEMBLY**
**THIRTEENTH SESSION**

# THE KARNATAKA SECONDARY EDUCATION EXAMINATION BOARD (AMENDMENT) BILL, 2022

**(LA Bill No. 27 of 2022)**

A Bill further to amend the Karnataka Secondary Education Examination Board Act, 1966.

Whereas it is expedient further to amend the Karnataka Secondary Education Examination Board Act, 1966 (Karnataka Act 16 of 1966) for the purposes hereinafter appearing;

Be it enacted by Karnataka State Legislature in the seventy third year of the Republic of India, as follows:-

**1. Short title and commencement**.-(1) This Act may be called the Karnataka Secondary Education Examination Board (Amendment) Act, 2022.

(2) It shall come in to force at once.

**2. Amendment of title and long title**.- In the Karnataka Secondary Education Examination Board Act, 1966 (Karnataka Act 16 of 1966) (hereinafter referred to as the principal Act) in the title and long title, for the words "Karnataka Secondary Education Examination Board", the words "Karnataka School Examination and Assessment Board" shall be substituted.

**3. Amendment of section 1.-** In section 1 of the principal Act, in sub-section (1), for the words "Karnataka Secondary Education Examination Board", the words "Karnataka School Examination and Assessment Board" shall be substituted .

**4. Amendment of section 2.-** In section 2 of the principal Act,-

(1) in clause (a), for the words, "Karnataka Secondary Education Examination Board", the words "Karnataka School Examination and Assessment Board" shall be substituted;

(2) for clause (da), the following shall be substituted, namely:-

"(da) "Director" means and includes,-

(i) the Director (Exams) for SSLC and other examination; and

(ii) the Director (PU Exams) for Pre University examinations."

(3) after clause (i), the following shall be inserted, namely:-

"(ia) "Principal" means Principal of Government Pre-university colleges and Composite Pre-university Colleges or Principal of recognised Pre-university Colleges."

(4) after clause (j), the following shall be inserted, namely:-

"(ja) "Higher Secondary School" means, Government Pre-university colleges and Composite Pre-university Colleges including any recognised Pre-university Colleges."

(5) for clause (o), the following shall be substituted, namely:-

"(o) "Vice-chairman" means,-

(i) the Vice-chairman-1 for SSLC and other examination; and

(ii) the Vice-chairman-2 for Pre University examinations."

**5. Amendment of section 3.-** In section 3 of the principal Act,-

(1) in sub-section (1), for the words "Board of Secondary Education Examination", the words "Board of School Examination and Assessment", shall be substituted .

(2) in sub-section (2), for the words "Karnataka Secondary Education Examination Board", the words "Karnataka School Examination and Assessment Board", shall be substituted.

**6. Amendment of section 4.-** In section 4 of the principal Act,-

(1) in sub-section (1) for the words, "the Commissioner for public instruction shall ex-officio be the Chairman of the Board", the words, brackets and letters "the Chairman of the Board shall be appointed by the Government in the cadre of IAS (Selection Grade or Junior Administrative Grade)", shall be substituted.

(2) after sub-section (1), the following shall be inserted, namely:-

"(1a) The Commissioner for public instruction Department and Director, Pre-university Education Department shall special invitees of the Board."

(3) for sub-section (2), the following shall be substituted, namely:-

"(2) The Director-1 shall be an officer of the Department of Public Instruction, not below the rank of a Joint Director and Director-2 shall be an officer of Pre-university Education not below the rank of a Joint Director, appointed by notification by the State Government. He shall be whole time officer of the Board and shall hold office during the pleasure of the State Government."

(4) in sub-section (4),-

(i) under heading '(A) Ex-officio member',-

(a) for clause (a), the following shall be substituted, namely:-

"(a) The Additional Commissioner for Public Instruction Dharwad and Kalaburgi";

(b) in clause (d), for the words "Department of Agriculture", the words "Department of Skill Development not below the rank of Joint Director", shall be substituted;

(c) clause (de), shall be omitted; and

(d) clause (e), shall be omitted.

(ii) the heading "(B) Elected Members" along with the entries thereof shall be omitted.

(iii) under heading '(C) Nominated Members',-

(a) after clause (a), the following shall be inserted, namely:-

"(aa) two members nominated by the State Government from amongst the Principal or Lecturers of Higher Secondary School.";

(b) in clause (c), for the words "Secondary teachers training", the words "College of teacher education", shall be substituted;

(c) in clause (d), for the words "two of the heads of the Primary teachers training colleges", the words "one of the heads of the District Institute of Education and training" shall be substituted; and

(d) in clause (e), for the words "six persons", the words "two persons", shall be substituted.

(iv) the proviso shall be omitted.

**7. Amendment of section 15.-** In section 15 of the principal Act in clause (a), after item (iv), the following shall be inserted, namely:-

"(v) Pre-university examinations; and

(vi) Diploma in Pre-School Education."

**8. Amendment of section 17.-** In section 17 of the principal Act,-

(1) in sub-section (2), after the words “and inspection over its”, the word “respective”, shall be inserted.

(2) in sub-section (6), after the words “his duty shall be performed by the Vice-chairman”, the words “as directed by the Chairman”, shall be inserted.

**9. Amendment of section 18.-** In section 18 of the principal Act,-

(1) for sub-section (1), the following shall be substituted, namely:-

“(1) The Board shall have two Secretaries one shall be an officer of the Department of Public Instruction not below the rank of a Joint Director of Public Instruction and one shall be an officer of Pre-university Education not below the rank of a Joint Director appointed by the State Government.

(1A) The preparation, distribution and maintain confidentiality of the question papers is the prerogative of the Directors (Secretary) of the concerned examination. No authority or any member of the Board, or anybody shall interfere in this matter.”

(2) in sub-section (2), for the word “Director”, the word “Chairman” shall be substituted.

**10. Amendment of section 24.-** In section 24 of the principal Act, after sub-section (2), the following sub-section shall be inserted, namely:-

“(3) The Board may cause to conduct internal audit of accounts of the Board through a registered chartered accountant and pay such fee as required to the audit.”

**11. Omission of section 29.-** Section 29 of the principle Act shall be omitted.

## STATEMENT OF OBJECTS AND REASONS

it is considered necessary to amend the Karnataka Secondary Education Examination Board Act, 1966 (Karnataka Act 16 of 1966) to,-

(1) change the Nomenclature of the Karnataka Secondary Education Examination Board as Karnataka School Examination and Assessment Board in accordance with the New Education Policy 2020.

(2) conduct the Pre-University Examination in addition to SSLC and other public examinations through the Karnataka School Examination and Assessment Board.

(3) re-designate post of Director mass education as Chairmen of the Karnataka School Examination and Assessment Board.

Certain other amendments incidentals or consequential are also made.

Hence, the Bill.

**FINANCIAL MEMORANDUM**

There will be an approximate recurring expenditure of Rs. 2.00 Lakhs per annum by the proposed legislative measure.

**B.C NAGESH**
Minister for School Education and
Literacy and Sakala

**M.K. VISHALAKSHI**
Secretary
Karnataka Legislative Assembly

**ANNEXURE**

**EXTRACT FROM THE KARNATAKA SECONDARY EDUCATION EXAMINATION BOARD ACT, 1966 (KARNATAKA ACT 16 OF 1966)**

**xxx xxx xxx**

**THE KARNATAKASECONDARY EDUCATION EXAMINATION BOARD ACT, 1966.**

**(Received the assent of the Governor on the Twenty-seventh day of April, 1966)**

WHEREAS it is expedient to establish a Board for the purpose of holding and conducting certain public examinations;

BE it enacted by the Karnataka State Legislature in the Seventeenth Year of the Republic of India as follows:-

**1. Short title, extent and commencement.-** (1) This Act may be called the Karnataka Secondary Education Examination Board Act, 1966.

**xxx xxx xxx**

**2. Definitions.-** In this Act, unless the context otherwise requires,-

(a) “Board” means the Karnataka Secondary Education Examination Board constituted under this Act;

**xxx xxx xxx**

(da) "Director" means the Director of the Board.

**xxx xxx xxx**

(o) “Vice-Chairman” means the Vice-Chairman of the Board.

**xxx xxx xxx**

**3. Incorporation of the Board.-** (1) The State Government shall, as soon as may be, establish by notification a Board of Secondary Education Examination with effect from such date as may be specified in the notification.

(2) The Board shall be a body corporate by the name of the Karnataka Secondary Education Examination Board and shall have perpetual succession and a common seal and may sue and be sued by the corporate name and shall be competent to acquire and hold property, both moveable and immoveable, and subject to such restrictions and conditions as may be prescribed, to lease, sell or otherwise transfer moveable or immoveable property which may have been vested in or acquired by it and to contract and do all things necessary for the purposes of this Act.

**xxx xxx xxx**

**4. Constitution of the Board.-** (1) The Board shall consist of a Chairman, a Vice-Chairman and members as specified in this section. The Commissioner for Public Instruction shall ex-officio be the Chairman of the Board;

(2) The Director shall be an officer of the Department of Public Instruction, not below the rank of a Additional Director, appointed by notification by the State Government. He shall be a whole time officer of the Board and shall hold office during the pleasure of the State Government.

**xxx xxx xxx**

(4) The Board shall also consist of the following members:-

(A) Ex-officio members:

(a) the Divisional Secretaries and Ex-officio Joint Directors of Public Instructions of the Board;

**xxx xxx xxx**

(d) an officer of the Department of Agriculture designated by the State Government;

**xxx xxx xxx**

(de) Director of the Board in charge of other Examinations.

(e) eight Officers of the Department of Public Instruction, who are in charge of Commercial Education, Home Science Education, Arts and Crafts, Music, Drama and Dance, Hindi Education, Sanskrit Education 2 [State Education Unit]2 and Physical Education, designated by the State Government;

(B) Elected Members:

Two members elected in the manner prescribed from amongst themselves by the members of the Academic Councils of each of the Universities established by law in the State.

(C) Nominated Members:

(a) five members nominated by the State Government from amongst Head Masters and Head Mistresses of recognised High Schools;

(b) five members nominated by the State Government from amongst teachers in recognised High Schools who have put in not less than ten years service as teachers;

(c) one of the Principals of the Secondary Teachers' Training Colleges in the State nominated by the State Government;

(d) two of the heads of the Primary Teachers' Training Colleges in the State, nominated by the State Government;

(e) six persons (not being Head Masters, Head Mistresses or teachers in recognised High schools) who have had experience in matters connected with Secondary Education, nominated by the State Government:

Provided that a member shall cease to hold office as such member,-

(i) if he is elected under paragraph (B) and ceases to be the member of the Academic Council concerned;

(ii) if he is nominated under clause (a) or clause (b) of paragraph (C) and ceases to be either a Head Master, or a Head Mistress, or a teacher of a recognised High School, as the case may be; and

(iii) if he is nominated under clause (c) or clause (d) of paragraph (C) and ceases to be a Principal of a Secondary Teachers' Training College or the head of a Primary Teachers' Training College.

**xxx xxx xxx**

**15. Powers and duties of the Board.-** Subject to the provisions of this Act, the powers and duties of the Board shall be as follows, namely:-

(a) to hold,-

(i) the Karnataka Secondary School Leaving Certificate Examination;

(ii) the Teachers Certificate Examination (Higher);

(iii) the Teachers Certificate Examination (Lower);

(iv) any other examination which the State Government may from time to time by notification specify;

**xxx xxx xxx**

**17. Powers and duties of the Chairman.-**

**xxx xxx xxx**

(2) The Director shall be the principal executive officer of the Board and shall exercise general control, supervision and inspection over its affairs. It shall be his duty to ensure that the provisions of this Act, the rules, regulations and bye-laws are duly observed and he shall have and exercise all powers necessary for the purpose.

**xxx xxx xxx**

(6) During the absence of the Chairman on leave, by reason of illness or deputation on other duty connected with the Board or any other cause or pending filling up of the vacancy caused in any manner, his duties shall be performed by the Vice-Chairman and in the absence of the Vice-Chairman by such member as the state Government may direct.

**xxx xxx xxx**

**18. Appointment, powers and duties of Secretary.-** (1) The Board shall have a Secretary who shall be an officer of the Department of Public Instruction not below the rank of a Deputy Director of Public Instruction, appointed by the State Government.

(2) The Secretary shall, subject to the control of the Director exercise such powers and perform such duties as may be prescribed.

**xxx xxx xxx**

**24. Board Fund.-** (1) The Board shall have its own fund and the following moneys shall be placed to the credit thereof:-

(a) fees and charges levied by the Board;

(b) contribution, if any, paid by the State Government; and

(c) any money received by or on behalf of the Board.

(2) The Board Fund shall be kept in a Scheduled Bank as defined in the Reserve Bank of India Act, 1934, or invested in securities authorised by the Indian Trusts Act, 1882 at the discretion of the Board.

**xxx** **xxx** **xxx**

**29. First appointment of University representatives.-** Notwithstanding anything contained in section 4, the members under paragraph (B) of subsection (4) of section 4 may, on the first constitution of the Board, be nominated by the State Government, but the members so nominated shall hold office only until they can be replaced by members elected as provided in that paragraph and the members so elected shall hold office so long only as the members replaced would have held office had they not been replaced.

**xxx** **xxx** **xxx**

Govt. Press, Vikasa Soudha, Bengaluru, 21st Sept, 2022, P7, W.D. , Copies 500